ಸಾಕ್ಷಿಯನ್ನು ದಿಃ 01-01-2018 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಮ್ ಎ ಬಿ ವಕೀಲರಿಂದಃ

1. ನಮ್ಮ ತಂದೆ ವೀರಭದ್ರಪ್ಪ ರವರು ತೀರಿಕೊಂಡು 2006ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ ಕಾಳವ್ವ ರವರು 2011ರಲ್ಲಿ ಮೃತಪಟ್ಟಿರುತ್ತಾರೆ. ಪ್ರತಿವಾದಿಯರ ಮನೆತನದ ನನಗೆ ಮಾಹಿತಿ ಇದೆ. ನಾನು 1ನೇ ಪ್ರತಿವಾದಿಯ ತಂದೆ ದಾವಲ್‌ಸಾಬ್ ರವರನ್ನು ನೋಡಿರುತ್ತೇನೆ. ಅವರು 1945ರಲ್ಲಿ ಮೃತಪಟ್ಟಿರುತ್ತಾರೆ. ದಾವಲ್‌ಸಾಬ್‌ರವರತಂದೆ ಹುಸೇನಸಾಬ್ ಯಾವಾಗ ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಮನೆತನದ ಇನ್ನೊಂದು ಹೆಸರು ಜಿರಕ್ಲಿ.

2. ನನ್ನ ಸಹೋದರ ಈಶ್ವರಪ್ಪ ರವರ ಹೆಂಡತಿಯ ಹೆಸರು ಮಂಜುಳಾ. ನನ್ನ ಸಹೋದರ ಈಶ್ವರಪ್ಪ ಹಾಗೂ ಅವರ ಕುಟುಂಬದ ಸದಸ್ಯರು ಬೆಟಗೇರಿಯಲ್ಲಿ ವಾಸ ಇರುತ್ತಾರೆ. ನಾನು ಹಾಗೂ ನನ್ನ ಇತರೆ ಸಹೋದರರು ಸಹ ಬೆಟಗೇರಿಯಲ್ಲಿ ವಾಸ ಇದ್ದೇವೆ. ನಾನು ಹಾತಲಗೇರಿ ಗ್ರಾಮದಲ್ಲಿ ಎಂದೂ ವಾಸ ಇರಲಿಲ್ಲ. ನಾನು ಹಾಗೂ ನನ್ನ ಸಹೋದರ ಹಾಗೂ ಅವರ ಕುಟುಂಬದವರು ಹಾತಲಗೇರಿ ಗ್ರಾಮದಲ್ಲಿ ವಾಸವಾಗಿದ್ದೇವು ಎಂದು ನನ್ನ ವಾದ ಪತ್ರದಲ್ಲಿ ಸುಳ್ಳು ಮಾಹಿತಿ ಬರೆಯಿಸಿದ್ದೇನೆ ಎನ್ನುವದು ಸರಿಯಲ್ಲ. ಪ್ರತಿವಾದಿ ನಂಃ1 ರವರಿಗೆ ಈಗ 71 ವರ್ಷ ವಯಸ್ಸು ಇರಬಹುದು. ಪ್ರತಿವಾದಿ ನಂಃ2 ರಿಂದ 16 ರವರ ವಯಸ್ಸುಗಳನ್ನು ತಪ್ಪು ನಮೂದು ಮಾಡಲಾಗಿದೆ ಎನ್ನುವದು ಸರಿಯಲ್ಲ. ಫಕ್ಕುಸಾಬ್ ರವರಿಗೆ ಹುಸೇನಬೀ (ಪ್ರತಿವಾದಿ ನಂಃ14) ಎನ್ನುವ ಮಗಳು ಇರುವುದಿಲ್ಲ ಎನ್ನುವದು ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಗಳ ಸರ್ವೆ ನಂಬರು ಗೊತ್ತು, ಆದರೆ ವಿಸ್ತೀರ್ಣ ಗೊತ್ತಿಲ್ಲ. ಆದರೆ ಒಟ್ಟು ವಿಸ್ತೀರ್ಣ ಸುಮಾರು 18 ಎಕರೆ ಇರಬಹುದು. ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಹುಸೇನಸಾಬ್ ರವರು ದಾವಾ ಆಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ಹಾಗೂ ಭೂನ್ಯಾಯಾ ಮಂಡಳಿಯ ಆದೇಶಗಳ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ:105 ಒಟ್ಟು 18 ಎಕರೆ 26 ಗುಂಟೆ ಜಮೀನು ಇದ್ದು ಅವುಗಳು 1931 ರಲ್ಲಿ ಸರ್ವೆ ನಂ:105/1 ರಿಂದ 105/3, 105/4ಎ ಹಾಗೂ 105/4ಬಿ ಎಂದು ಸಬ್ ಡಿವಿಜನ್ ಆದವು ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂ:105/1 ರಿಂದ 105/3, 105/4ಎ ಹಾಗೂ 105/4ಬಿ ಯಾವ ಯಾವ ದಿಕ್ಕಿನಲ್ಲಿ ಬರುತ್ತವೆ ಎನ್ನುವ ಪ್ರಶ್ನೆಗೆ ನಾನು ಅವುಗಳನ್ನು ಇನ್ನು ಅಳತೆ ಮಾಡಿ ನೋಡಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ:105/1 ರಿಂದ 105/3, 105/4ಎ ಹಾಗೂ 105/4ಬಿ ಆಸ್ತಿಗಳು ವೀರಭದ್ರಪ್ಪ ರವರಿಗೆ ಅವರ ಪೂರ್ವಜರಿಂದ ಬಂದಿರುತ್ತವೆ.

4. ನನ್ನ ತಂದೆ ಅಲ್ಪವಯಿ ಇದ್ದಾಗ ಅವರ ಪರವಾಗಿ ಅವರ ತಾಯಿ ಕಾಳವ್ವ ರವರು ದಿ:02-08-1928 ರಲ್ಲಿ ಸರ್ವೆ ನಂ:105/1 ವಿಸ್ತೀರ್ಣ 1 ಎಕರೆ 39 ಗುಂಟೆ ಜಮೀನ್‌ನ್ನು ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿರವರಿಗೆ ಹಾಗೂ ಈರವ್ವ ಕೋಂ ದೊಡ್ಡಮಾನಪ್ಪ ಬಡಿಗೇರ ರವರಿಗೆ ದಿ:03-08-1928 ರಂದು ಸರ್ವೆ ನಂ:105/2 ವಿಸ್ತೀರ್ಣ 1 ಎಕರೆ 34 ಗುಂಟೆ ಜಮೀನ್‌ನ್ನು ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿರವರಿಗೆ ಮಾರಾಟ ಮಾಡಿರುತ್ತಾರೆ ಎನ್ನುವದು ಸರಿಯಲ್ಲ. ನೊಂದಾಯಿತ ಖರೀದಿ ಪತ್ರಗಳ ಆಧಾರದ ಮೇರೆಗೆ ಹಾಗೂ ಜೆ-ಫಾರ್ಮ್ ಆಧಾರದ ಮೇರೆಗೆ ಮೇಲೆ ಹೇಳಿದ ದಾಖಲೆಗಳು ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿರವರ ಹೆಸರಿಗೆ

ವರ್ಗಾವಣೆ ಆದವು ಎನ್ನುವದು ನನಗೆ ಗೊತ್ತಿಲ್ಲ. ನಂತರ ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿ ರವರು ಖರೀದಿಸಿದ ಎರಡು ಆಸ್ತಿಗಳು ಒಂದಕ್ಕೊಂದು ಕೂಡಿಕೊಂಡು ಸರ್ವೆ ನಂಃ105/1 ಎಂದು ಹಾಗೂ ವಿಸ್ತೀರ್ಣ 4 ಎಕರೆ 1 ಗುಂಟೆ ಎಂದು ಆಯಿತು ಹಾಗೂ ಅದೇ ರೀತಿ ಸರ್ವೆ ನಂಃ105/4ಎ ಹಾಗೂ 105/4ಬಿ ಗಳು ಸಹ ಒಂದಕ್ಕೊಂದು ಕೂಡಿಕೊಂಡು ಸರ್ವೆ ನಂಃ105/4 ಎಂದು ವಿಸ್ತೀರ್ಣ 9 ಎಕರೆ 6 ಗುಂಟೆ ಎಂದು ಆಯಿತು ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂಃ105/3 ವಿಸ್ತೀರ್ಣ 3 ಎಕರೆ 26 ಗುಂಟೆ ಜಮೀನ್‌ನ್ನು ಹೊಸ ನಂಬರು ಕೊಡಲಾಗಿ ಸರ್ವೆ ನಂಃ105/2 ಎಂದು ಹಾಗೂ ವಿಸ್ತೀರ್ಣ 3 ಎಕರೆ 26 ಗುಂಟೆ ಎಂದು ಬದಲಾವಣೆ ಮಾಡಲಾಯಿತು ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂಃ105/3 ಜಮೀನಿಗೆ ವಿಸ್ತೀರ್ಣ 1 ಎಕರೆ 31 ಗುಂಟೆ ಎಂದು ನಿಗಧಿಪಡಿಸಲಾಗಿತ್ತು ಎನ್ನುವದು ನಿಜ. ಸದರಿ ಮೇಲೆ ಹೇಳಿದ ಎಲ್ಲಾ ಬದಲಾವಣೆಗಳು “ಡ” ಸಂಃ2358 ರಂತೆ ಆಗಿರುತ್ತದೆ ಎನ್ನುವದು ನಿಜ. ಸಾಕ್ಷಿಯು “ಡ” ಸಂಃ 2358 ನೋಡಿ ಅದನ್ನು ಗುರುತಿಸಿದ್ದು ಸದರಿ ದಾಖಲೆಯ ದೃಡೀಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1ರ ಪ್ರಕಾರ ಸರ್ವೆನಂಃ105/1 ಜಮೀನಿಗೆ ಕ್ಷೇತ್ರ 4 ಎಕರೆ3 ಗುಂಟೆ ಜಮೀನಿಗೆ ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿರವರು ಮಾಲೀಕರು ಎಂದು, ಸರ್ವೆ ನಂಃ105/2 ಜಮೀನಿಗೆ ಕ್ಷೇತ್ರ 3 ಎಕರೆ 26 ಗುಂಟೆ ಜಮೀನಿಗೆ ಈರವ್ವ ಕೋಂ ದೊಡ್ಡಮಾನಪ್ಪ ಬಡಿಗೇರ ರವರು ಮಾಲೀಕರು ಎಂದು, ಸರ್ವೆ ನಂಃ105/3 ಜಮೀನಿಗೆ ಕ್ಷೇತ್ರ 1 ಎಕರೆ

31 ಗುಂಟೆ ಜಮೀನಿಗೆ ಕಾಳವ್ವ ಕೋಂ ಬಸಪ್ಪ ರವರು ಮಾಲೀಕರು ಎಂದು ಹಾಗೂ ಸರ್ವೆನಂಃ105/4 ಜಮೀನಿಗೆ ಕ್ಷೇತ್ರ 9 ಎಕರೆ 6 ಗುಂಟೆ ಜಮೀನಿಗೆ ಈಶ್ವರಪ್ಪ ರುದ್ರಪ್ಪ ಬಡಿಗೇರ ರವರು ಮಾಲೀಕರು ಎಂದು ದಾಖಲೆ ದೃಡೀಕರಿಸಲಾಯಿತು ಎನ್ನುವದು ನಿಜ. ಈಶ್ವರಪ್ಪ ರುದ್ರಪ್ಪ ಬಡಿಗೇರ ರವರು ನನ್ನ ತಂದೆಯ ಅಣ್ಣ. ನನ್ನ ತಂದೆಗೆ ಮೂರು ಜನ ಅಣ್ಣಂದಿರು ಅವರು ಸಣ್ಣಮಾನಪ್ಪ, ದೊಡ್ಡಮಾನಪ್ಪ ಹಾಗೂ ಲಕ್ಷ್ಮಪ್ಪ. ಲಕ್ಷ್ಮಪ್ಪ ರವರ ಮಗನ ಹೆಸರು ಶಿವಪ್ಪ ಎನ್ನುವದು ನನಗೆ ಗೊತ್ತಿಲ್ಲ. ಶಿವಪ್ಪನ ತಾಯಿಯ ಹೆಸರು ದೇವಕ್ಕ ಎನ್ನುವದು ನಿಜ. ಸರ್ವೆ ನಂಃ105 ಒಟ್ಟು ಕ್ಷೇತ್ರ ನನ್ನ ತಂದೆಗೆ ಸೇರಿರುತ್ತದೆ ಎಂದು ನಾನು ಸುಳ್ಳು ಮಾಹಿತಿ ಬರೆಯಿಸಿದ್ದೇನೆ ಎನ್ನುವದು ಸರಿಯಲ್ಲ. ನನ್ನ ತಂದೆಗೆ ಸರ್ವೆ ನಂಃ105 ರಲ್ಲಿ ಅಲ್ಪ ವಿಸ್ತೀರ್ಣದ ಆಸ್ತಿಗೆ ಹಕ್ಕು ಇದ್ದು ಅದನ್ನು ನನ್ನ ತಂದೆ ಅಲ್ಪವಯಿ ಇದ್ದಾಗ ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿ ರವರಿಗೆ ಮಾರಾಟ ಮಾಡಲಾಗಿದೆ ಎನ್ನುವದು ಸರಿಯಲ್ಲ. ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿ ರವರು ಖರೀದಿಸಿದ ಆಸ್ತಿ ಅಲ್ಲದೇ ಸರ್ವೆ ನಂಃ105ರ ಉಳಿದ ಜಮೀನ್‌ನ್ನು ಸಹ ರೈತಾಪಿ ನಾತೆಯಿಂದ ಉಳುಮೆ ಮಾಡುತ್ತಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯ ಸ್ವಾಧೀನದಲ್ಲಿ 18 ಎಕರೆ ಜಮೀನು ಇತ್ತು ನನ್ನ ತಂದೆ ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿ ರವರಿಗೆ ಕೋರ್‌ನಾತೆಯಿಂದ ಸಾಗುವಳಿ ಮಾಡಲು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

5. ಸರ್ವೆ ನಂಃ105/4 ವಿಸ್ತೀರ್ಣ 9 ಎಕರೆ 17 ಗುಂಟೆ ಜಮೀನ್‌ನ್ನು ದಿಃ21-01-1937ರಲ್ಲಿ ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿ ರವರಿಗೆ ನನ್ನ ತಂದೆ ಅಲ್ಪವಯಿ ಇದ್ದಾಗ ಅವರ ಪರವಾಗಿ ಅವರ ತಾಯಿ ಕಾಳವ್ವ ಹಾಗೂ ಶಿವಪ್ಪ ತಂದೆ ಲಕ್ಷ್ಮಪ್ಪ ಬಡಿಗೇರ ರವರು ಅಲ್ಪವಯಿ ಇದ್ದಾಗ ಅವರ ಪರವಾಗಿ ಅವರ ತಾಯಿ ದೇವಕ್ಕ ರವರು ಆಸ್ತಿಗಳನ್ನು ಮಾರಾಟ ಮಾಡಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಅದರಂತೆ "ಡ" ಸಂಃ4127 ಮಂಜೂರು ಆಗಿರುತ್ತದೆ ಎನ್ನುವದು ನಿಜ. ಸಾಕ್ಷಿಯು ಮುಂದುವರೆದು ಪುನಹ ಸರಿಯಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಪುನಹ ದಾಖಲೆಯನ್ನು ನೋಡಿ ಅದನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿ ರವರು ತಾನು 1928 ಹಾಗೂ 1937 ರಲ್ಲಿ ಆಸ್ತಿಗಳನ್ನು ಖರೀದಿ ಮಾಡಿ ಅವುಗಳನ್ನು ಮಾಲೀಕನಾತೆಯಿಂದ ಸ್ವಾಧೀನದಲ್ಲಿದ್ದರು ಎನ್ನುವದು ನಿಜ. ಸರ್ವೆ ನಂಃ105 ಎರಡು ಜಮೀನುಗಳನ್ನು ಹುಸೇನ್‌ಸಾಬ್ ದಾವಲ್‌ಸಾಬ್ ಬೆಲೇರಿ ರವರು ಖರೀದಿಸಿದ್ದು ಹಾಗೂ ಇನ್ನುಳಿದ ಜಮೀನುಗಳನ್ನು ರೈತಾಪಿ ನಾತೆಯಿಂದ ಸ್ವಾಧೀನದಲ್ಲಿ ಇದ್ದುದರಿಂದ ಅವರಿಗೆ 1948 ರಿಂದ ಬಾಂಬೆ ಟೆನೆನ್ಸಿ ಆಕ್ಟ್‌ರಡಿಯಲ್ಲಿ ಸಂರಕ್ಷಿತ ರೈತ ಎಂದು ಘೋಷಣೆ ಮಾಡಲಾಗಿತ್ತು ಎನ್ನುವದು ನನಗೆ ಗೊತ್ತಿಲ್ಲ. ಅದರಂತೆ ಡ ಸಂಃ 5929 ಮಂಜೂರಾಗಿತ್ತು ಎನ್ನುವದು ನನಗೆ ಗೊತ್ತಿಲ್ಲ. ನಾನು ಡ ಸಂಃ5929 ದಾಖಲೆಯನ್ನು ಪರಿಶೀಲನೆ ಮಾಡಿರುವುದಿಲ್ಲ. ನಾನು ಡ ಸಂಃ 5929 ದಾಖಲೆಯನ್ನು ನೋಡಿದ್ದರೂ ಅದರ ಬಗ್ಗೆ ನನಗೆ ಮಾಹಿತಿ ಇದ್ದರೂ ಅದು

ನನ್ನ ಕೇಸಿಗೆ ಪ್ರತಿಕೂಲವಾಗಿದ್ದರಿಂದ ಅದನ್ನು ಹಾಜರು ಮಾಡದೇ ಹಾಗೂ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಎನ್ನುವದು ಸರಿಯಲ್ಲ.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಅದೆ.

ಸಹಿ- 01-01-2018

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು

ಗದಗ